ಕರ್ನಾಟಕ ವಿಧಾನಸಭೆ

ಸೋಮವಾರ 24ನೇ ಫೆಬ್ರವರಿ 1997ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ
ಸಭಾಂಗಣದಲ್ಲಿ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ರಮೇಶ್‌ಕುಮಾರ್) ರವರು,
ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

1 ಸಂತಾಪ ಸೂಚನೆ

ಅಧ್ಯಕ್ಷರು : ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ. ಎನ್. ಕಾಮ್‌ತಿಕರ್ ಅವರು ದಿನಾಂಕ 4-12-1996ರಂದು ನಿಧನರಾದುದನ್ನು ಈ ಸದನಕ್ಕೆ ವಿಷಾದದಿಂದ ತಿಳಿಸುತ್ತಿದ್ದೇನೆ. ಎರಡನೇ ವಿಧಾನ ಸಭೆಗೆ ಹುಮ್ನಾಬಾದ್ ಕ್ಷೇತ್ರದಿಂದ ಆಯ್ಕೆಯಾಗಿದ್ದ ಶ್ರೀಯುತರು 1952 ರಿಂದ 1957ರವರೆಗೆ ಹೈದರಾಬಾದ್ ವಿಧಾನ ಸಭೆಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ವೃತ್ತಿಯಲ್ಲಿ ವಕೀಲರಾಗಿದ್ದ ಶ್ರೀಯುತರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರೀಯವಾಗಿ ಭಾಗವಹಿಸಿ ಸೆರೆಮನೆ ವಾಸ ಅನುಭವಿಸಿದ್ದರು. ಭಾರತ್ ಸೇವಕ್ ಸಮಾಜ ಹಾಗೂ ಭೂದಾನ ಸಮಿತಿಯ ಸಂಚಾಲಕರಾಗಿ ಬೀದರ್ ಜಿಲ್ಲೆಯಲ್ಲಿ ಸೇವೆ ಸಲ್ಲಿಸಿದ್ದರು.

ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಸದನವು ಎದ್ದು ನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನಾಚರಿಸಿತು)

ಅಧ್ಯಕ್ಷರು : ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬವರ್ಗಕ್ಕೆ ಕಳುಹಿಸಲಾಗುವುದು.

2 ಗಮನ ಸೆಳೆಯುವ ಸೂಚನೆಗಳು

ವಿಷಯ: ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಅವ್ಯವಹಾರಗಳಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟ.

ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಅವ್ಯವಹಾರಗಳಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗಿರುವ ಬಗ್ಗೆ - ಮಾನ್ಯ ಜವಳಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್ (ಜವಳಿ ಸಚಿವರು) : ಮಾನ್ಯ ಅಧ್ಯಕ್ಷರೇ, ಬ್ಯಾಂಕ್ ಸ್ಟ್ರೀಟ್, ಕರೋಲ್‌ಬಾಗ್, ನವದೆಹಲಿಯಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ತನ್ನ ಮಾರಾಟ ಮಳಿಗೆಯನ್ನು ನಡೆಸಲು ನವೆಂಬರ್, 1986ರಲ್ಲಿ ಮಾಹೆಯಾನ ರೂ. 15,000.00 ಬಾಡಿಗೆ ಆಧಾರದ ಮೇಲೆ ಮೆಃ ಎಸ್. ಎಲ್. ಅಸೊಸಿಯೇಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಂದ ಕಟ್ಟಡವನ್ನು ಬಾಡಿಗೆಗೆ ಪಡೆದುಕೊಂಡಿತ್ತು. ಆಗ ಮಾಡಿಕೊಂಡ ಕರಾರಿನ ಪ್ರಕಾರ ಬಾಡಿಗೆ ಅವಧಿಯು ಮೂರು (3) ವರ್ಷಗಳಿದ್ದು, ಈ ಅವಧಿ ತೀರಿದ ನಂತರ ಬಾಡಿಗೆ ಕರಾರನ್ನು ಮತ್ತೆ ಮೂರು ವರ್ಷಗಳ ಅವಧಿಗೆ ನವೀಕರಿಸಿಕೊಳ್ಳಲು ಅವಕಾಶವಿತ್ತು. ನವೀಕರಿಸಿದಲ್ಲಿ ಶೇಕಡಾ 10ಕ್ಕೆ ಕಡಿಮೆ ಇಲ್ಲದಂತೆ ಬಾಡಿಗೆಯ ಹೆಚ್ಚಳದೊಂದಿಗೆ ಪರಸ್ಪರ ವಿಚಾರವಿನಿಮಯದೊಂದಿಗೆ ನಿರ್ಧರಿಸಬೇಕಿತ್ತು. ನಿಗಮವೂ ಬಾಡಿಗೆ ಕರಾರನ್ನು ನವೀಕರಿಸಲೂ ಕೋರಿದರೂ, ಕಟ್ಟಡದ ಮಾಲೀಕರು ಒಪ್ಪದೇ ಕಟ್ಟಡವನ್ನು ತೆರವು ಮಾಡಲು ಸೂಚಿಸಿದರು. ಇದಲ್ಲದೆ, ಕಟ್ಟಡದಿಂದ ನಿಗಮವನ್ನು ಹೊರ ಹಾಕಲು ಡಿಸೆಂಬರ್ 1990ರಲ್ಲಿ ದೆಹಲಿ ಉಚ್ಚ

ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿದ್ದು, ಈ ಅರ್ಜಿಯಲ್ಲಿ ದಿನಾಂಕ 31-10-1989ರ ನಂತರ ಕಟ್ಟಡವನ್ನು ಕಾನೂನು ಬಾಹಿರರಾಗಿ ಆಕ್ರಮಿಸಿರುವುದರಿಂದ ನಿಗಮವು ಪ್ರತಿ ಚದರ ಅಡಿಗೆ ರೂ. 42.00 ರಂತೆ ಪರಿಹಾರರನ್ನು ನೀಡಬೇಕೆಂದೂ ಸಹ ನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸಿದ್ದರು. ಕಟ್ಟಡದ ಮಾಲೀಕರು ಸಲ್ಲಿಸಿದ ದಾವೆಯ ವಿರುದ್ಧ ನಿಗಮದ ಹಿತವನ್ನು ಕಾಪಾಡಿಕೊಳ್ಳಲು, ದೆಹಲಿಯಲ್ಲಿ ಉತ್ತಮ ಪರಿಶ್ರಮ ಹೊಂದಿದಂತಹ ವಕೀಲರನ್ನು ನೇಮಿಸಿಕೊಳ್ಳಲಾಯಿತು.

ದೆಹಲಿ ಬಾಡಿಗೆ ನಿಯಂತ್ರಣ ಕಾಯಿದೆ ತಿದ್ದುಪಡಿಯ ಕಾನೂನು ಬದ್ಧತೆಯನ್ನು ಪ್ರಶ್ನಿಸಿ, ಅನೇಕ ರಿಟ್ ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಸರ್ವೋಚ್ಚ ನ್ಯಾಯಾಲಯ ರಿಟ್ ಅರ್ಜಿಗಳನ್ನು ವಿಲೇವಾರಿ ಮಾಡಿದ ನಂತರ ದೆಹಲಿ ಉಚ್ಚ ನ್ಯಾಯಾಲಯವು ಕಟ್ಟಡದ ಮಾಲೀಕರು ಸಲ್ಲಿಸಿದ ಮನವಿಯ ವಿಚಾರಣೆಯನ್ನು ಮುಂದುವರಿಸಿ, ಮಾರ್ಚ್, 1996ರಲ್ಲಿ ನಿಗಮವು ಕಟ್ಟಡವನ್ನು 3 ತಿಂಗಳೊಳಗೆ ತೆರವು ಮಾಡಬೇಕೆಂದು ಆದೇಶಿಸಿತು. ಉಚ್ಚ ನ್ಯಾಯಾಲಯಕ್ಕೆ ರಿಟ್ ಮನವಿಯನ್ನು ನಿಗಮವು 24-6-96ರಂದು ಸಲ್ಲಿಸಿತು. ರಿಟ್ ಮನವಿಯು ಇನ್ನೂ ಉಚ್ಚ ನ್ಯಾಯಾಲಯದಲ್ಲಿದ್ದಾಗಲೇ ಉಚ್ಚ ನ್ಯಾಯಾಲಯ ದಿನಾಂಕ 10-7-1996ರಂದು ವಾರೆಂಟ್ ನೀಡಿ ಕಟ್ಟಡದ ಸ್ವಾಧೀನವನ್ನು ಕಟ್ಟಡದ ಮಾಲೀಕರಿಗೆ ಕೂಡಲೇ ಬಿಟ್ಟುಕೊಡುವಂತೆ ಮತ್ತು ಯಾರಾದರೂ ಅಡೆತಡೆ ಮಾಡಿದಲ್ಲಿ ಅವರನ್ನು ಹೊರಗೆ ಹಾಕುವ ಅಧಿಕಾರವನ್ನು ಬೇಲಿಫರಿಗೆ ನೀಡಿತು. ನ್ಯಾಯಾಲಯದ ಬೇಲಿಫರು ದಿನಾಂಕ 12-7-1996ರ ಎರಡನೇ ಶನಿವಾರ ಮಧ್ಯಾಹ್ನ 3.00 ಗಂಟೆಯ ಸಮಯದಲ್ಲಿ ತಮ್ಮ ಸಿಬ್ಬಂದಿಯೊಡಗೂಡಿ ಹಠಾತ್ತನೆ ಮಾರಾಟ ಮಳಿಗೆಗೆ ಭೇಟಿ ನೀಡಿ, ಕೋರ್ಟ್ ಆದೇಶದ ಪ್ರಕಾರ ಕಟ್ಟಡ ಖಾಲಿ ಮಾಡುವಂತೆ ಸೂಚಿಸಿದರು. ಅಲ್ಲಿಯವರೆಗೆ ಕೋರ್ಟಿನ ದಿನಾಂಕ 10-7-1996ರ ಆದೇಶದ ಬಗ್ಗೆ ನಿಗಮಕ್ಕೆ ಮಾಡದೇ ಸೂಚನೆ ಅಥವಾ ಮಾಹಿತಿ ಇರಲಿಲ್ಲ. ಕೂಡಲೇ ಅಲ್ಲಿಯ ನಿಗಮದ ಮಾರಾಟ ವ್ಯವಸ್ಥಾಪಕರು ಮತ್ತು ವಕೀಲರು ಸ್ಥಳಕ್ಕೆ ಧಾವಿಸಿ ಸ್ವಲ್ಪ ಕಾಲಾವಕಾಶ ನೀಡುವಂತೆ ಕೋರಿದ್ದಾಗ್ಯೂ ನ್ಯಾಯಾಲಯದ ಅಧಿಕಾರಿಗಳು ಒಪ್ಪದೆ ಕಟ್ಟಡವನ್ನು ತೆರವು ಮಾಡಿಸಿರುತ್ತಾರೆ.

ಹೀಗೆ ನಿಗಮವು ತನ್ನ ಹಿತ ರಕ್ಷಿಸಿಕೊಳ್ಳಲು ಕಾನೂನು ರೀತ್ಯಾ ಲಭ್ಯವಿರುವ ಎಲ್ಲಾ ಕ್ರಮವನ್ನು ತೆಗೆದುಕೊಂಡಿದೆ. ಹಿಗಾಗಿ ಅವ್ಯವಹಾರಕ್ಕೆ ಇಲ್ಲಿ ಎಡೆಯಿಲ್ಲ.

ಕೊರಮಂಗಲ, ಜಯನಗರ ಮತ್ತು ಮಿಷನ್ ರಸ್ತೆಗಳಲ್ಲಿರುವ ಪ್ರಿಯದರ್ಶಿನಿ ಮಾರಾಟ ಮಳಿಗೆಗಳಲ್ಲಿ 1995-96ನೇ ಸಾಲಿನಲ್ಲಿ ಅವಶ್ಯಕತೆಯನ್ನು ಅನುಸರಿಸಿ, ರಿಪೇರಿ ಹಾಗೂ ಒಳಾಂಗಣ ನವೀಕರಣ ಕೆಲಸ ಕೈಗೊಂಡಿದ್ದರ ಬಗ್ಗೆ ನಿರ್ದಿಷ್ಟವಾದ ಅವ್ಯವಹಾರವೇನೂ ತಿಳಿಸಿಲ್ಲವಾದ್ದರಿಂದ ಉತ್ತರ ನೀಡಲಾಗುತ್ತಿಲ್ಲ.

ನೂಲು ಸರಬರಾಜಿನಲ್ಲಿ ಅವ್ಯವಹಾರ

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ನೇಕಾರರಿಗೆ ಬಟ್ಟೆ ಉತ್ಪಾದನೆ ಮಾಡಲು ಶೇಕಡ ನೂರರಷ್ಟು ಕಚ್ಚಾ ಮಾಲನ್ನು ಒದಗಿಸುತ್ತದೆ. ನಿಗಮವು ನೇಕಾರರಿಗೆ ಬಟ್ಟೆ ಉತ್ಪಾದಿಸಲು,

ವಿತರಣೆ ಮಾಡಲು, ಹತ್ತಿ, ಪಾಲಿಯೇಷ್ಟರ್, ರೇಷ್ಮೆ ಮತ್ತು ಕೃತಕ ರೇಷ್ಮೆ ಇವುಗಳಲ್ಲದೆ ಅರೆ ಶುದ್ಧ ಹಾಗೂ ಶುದ್ಧ ಜರಿಯನ್ನು ಖರೀದಿಸುತ್ತದೆ. ನಿಗಮವು ನೂಲು ಖರೀದಿ ಮಾಡುವಾಗ ಈ ಕೆಳಗೆ ತಿಳಿಸಿರುವ ನಿಯಮಗಳನ್ನು ಅನುಸರಿಸುತ್ತಿದ್ದು, ನೂಲು ಸರಬರಾಜಿನಲ್ಲಿ ಯಾವುದೇ ಅವ್ಯವಹಾರವಿರುವುದಿಲ್ಲ.

(ಅ) ಹತ್ತಿ ನೂಲು :- ನಿಗಮವು ಮಾಹೇಯಾನ ಸುಮಾರು 2.00 ಲಕ್ಷ ಕೆ. ಜಿ. ವಿವಿಧ ನಂಬರಿನ ನೂಲನ್ನು ಖರೀದಿಸುತ್ತಿದೆ. ನೂಲಿನ ಬೆಲೆಯನ್ನು ಜವಳಿ ಆಯುಕ್ತರ ಅಧ್ಯಕ್ಷತೆಯಲ್ಲಿರುವ ರಾಜ್ಯ ಮಟ್ಟದ ನೂಲಿನ ಬೆಲೆ ನಿಗದಿ ಸಮಿತಿ ನಿಗದಿಪಡಿಸಿರುತ್ತದೆ. ಸದರಿ ಬೆಲೆಗಳನ್ನು ನೀಡಿ ನಿಗಮವು ಅವಶ್ಯಕತೆಗನುಗುಣವಾಗಿ ಸಹಕಾರಿ ನೂಲಿನ ಗಿರಣಿಗಳ ಮೂಲಕ ಪಡೆಯುತ್ತಿದೆ.

(ಆ) ಪಾಲಿಯೇಸ್ಟರ್ ನೂಲು :- ಪಾಲಿಯೇಸ್ಟರ್ ಎಸ್ಕೋಸ್ ಗ್ರೇ ನೂಲನ್ನು ಸಹಕಾರಿ ಗಿರಣಿಗಳಿಂದ ಮತ್ತು ರಾಷ್ಟ್ರೀಯ ಜವಳಿ ನಿಗಮದಿಂದ ಖರೀದಿಸಲಾಗುತ್ತಿದೆ. ಪಾಲಿಯೇಸ್ಟರ್ ಬಣ್ಣದ ನೂಲು ಖಾಸಗಿ ವಲಯದಲ್ಲಿ ಮಾತ್ರ ಉತ್ಪಾದನೆಯಾಗುತ್ತಿದ್ದು, ಅವಶ್ಯಕತೆ ಹೆಚ್ಚಿನ ಪ್ರಮಾಣದಲ್ಲಿ ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಟೆಂಡರ್ ಜಾಹೀರಾತು ನೀಡಿ ಪಡೆಯಲಾಗುತ್ತಿದೆ. ಖಾಸಗಿ ವಲಯದಿಂದ ಪ್ರಸ್ತಾವಗಳಿಗೆ ಆಡಳಿತ ಮಂಡಳಿಯ ಉಪಸಮಿತಿಯ ಒಪ್ಪಿಗೆ ಪಡೆಯಲಾಗುತ್ತಿದೆ.

(ಇ) ರೇಷ್ಮೆ :- ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ಪ್ರತಿ ತಿಂಗಳು ಸುಮಾರು 3500 ಕೆ. ಜಿ. ಫಿಲೇಡಲ್, ಚರಸಿ ಮತ್ತು ರೂಪಿಯಾಸ್ ನೂಲನ್ನು ಖರೀದಿಸುತ್ತೀದೆ. ಚರಸ ಮತ್ತು ಡೂಪಿಯಾನ್ ನೂಲನ್ನು ರೇಷ್ಮೆ ಇಲಾಖೆಯ ಅಧಿನದಲ್ಲಿರುವ ಕರ್ನಾಟಕ ರೇಷ್ಮೆ ಫಿಲೇಚರ್ ಮತ್ತು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯಿಂದ ಪಡೆಯಲಾಗುತ್ತಿದೆ.

(ಈ) ಕೃತಕ ರೇಷ್ಮೆ ನೂಲು :- ನಿಗಮಕ್ಕೆ ಪ್ರತಿ ತಿಂಗಳು 3000 ಕೆ. ಜಿ. ಕೃತಕ ರೇಷ್ಮೆ ನೂಲಿನ ಅವಶ್ಯಕತೆಯಿದೆ. ಇದು ಖಾಸಗಿ ವಲಯದಲ್ಲಿ ಮಾತ್ರ ತಯಾರಾಗುತ್ತಿದೆ. ಕೃತಕ ರೇಷ್ಮೆಯನ್ನು ಕೈಮಗ್ಗ ವಲಯಕ್ಕೆ ನೀಡಲಾಗುತ್ತಿರುವ ಶೇಕಡ 50ರ ಅಬಕಾರಿ ಶುಲ್ಕವನ್ನು ವಿನಾಯತಿ ಪಡೆದು ಉತ್ಪಾದಕರಿಂದ ನೇರವಾಗಿ ಖರೀದಿಸಲಾಗುತ್ತಿದೆ.

(ಈ) ಜರಿ :- ಶುದ್ಧ ಹಾಗೂ ಅರೆ ಶುದ್ಧ ಜರಿ ತಯಾರಕರು ಗುಜರಾತಿನ ಸೂರತ್‌ನಲ್ಲಿದ್ದು, ನಿಗಮವು ಸೂರತ್‌ನಲ್ಲಿ ಪ್ರಸಾರವಾಗುವ ದಿನಪತ್ರಿಕೆಗಳಲ್ಲಿ ಜಾಹೀರಾತು ನೀಡಿ, ತ್ರೈಮಾಸಿಕ ಅವಧಿಗೆ ಜರಿ ಖರೀದಿಸುತ್ತಿದೆ.

ಖರೀದಿಯ ಪ್ರತಿ ಪ್ರಕ್ರಿಯೆಯಲ್ಲಿಯೂ ಬೇಕಾಗುವ ನೂಲಿನ ನಮೂನೆ, ಜರಿಯ ಗುಣಮಟ್ಟ ಇತ್ಯಾದಿಗಳನ್ನು ನಿಗದಿಪಡಿಸಲಾದ ಗುಣ ಪರೀಕ್ಷೆಗೆ ಒಳಪಟ್ಟು ಖರೀದಿಯನ್ನು ಮಾಡಲಾಗುತ್ತಿದೆ. ಹೀಗಾಗಿ ನಿಗಮದ ನೂಲು ಖರೀದಿಯಲ್ಲಾಗಲೀ, ನೇಕಾರರಿಗೆ ಅದರ ಸರಬರಾಜಿನಲ್ಲಾಗಲೀ ಯಾವುದೇ ವಿಧವಾದ ಅವ್ಯವಹಾರ ಇರುವುದಿಲ್ಲ.

ಶ್ರೀ ರಾಮದಾಸ್ : ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ದೆಹಲಿಯಲ್ಲಿದ್ದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಶೋ ರೂಮ್‌ನಲ್ಲಿನ ಅವ್ಯವಹಾರದ ಬಗ್ಗೆ ತಮ್ಮ ಗಮನ ಸೆಳೆದಾಗ

ಅಲ್ಲಿ ಯಾವುದೇ ವಿಧವಾದ ಅವ್ಯವಹಾರ ಆಗಿಲ್ಲವೆಂದು ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಆದರೆ ದೆಹಲಿಯ ಉಚ್ಚ ನ್ಯಾಯಾಲಯದಲ್ಲಿ ಮಳಿಗೆಯನ್ನು ತೆರವು ಮಾಡಬೇಕೆಂದು ಹೇಳಿ ಕೊಟ್ಟಂತಹ 3 ತಿಂಗಳ ಅವಧಿಯೊಳಗಾಗಿ ಅಪೀಲನ್ನು ಸಲ್ಲಿಸಬೇಕೆಂದು ತೀರ್ಪು ಬಂದಿತ್ತು. ಅದು 22-6-96ಕ್ಕೆ ಕೊನೆಯಾಗುತ್ತಿತ್ತು. ಉತ್ತರದಲ್ಲಿ ತಾವೇ ತಿಳಿಸಿರುವಂತೆ ಅಪೀಲನ್ನು ಇವರು ಸಲ್ಲಿಸಿದ್ದು 24-6-96ಕ್ಕೆ ಅಂದರೆ 2 ದಿವಸ ತಡವಾಗಿದೆ. 3 ತಿಂಗಳ ಸಮಯ ಕಳೆದು 2 ದಿವಸದ ನಂತರ ಕೋರ್ಟಿಗೆ ಅಪೀಲನ್ನು ಹಾಕಿದ್ದರು. ಆ ದೃಷ್ಟಿಯಿಂದ ನ್ಯಾಯಾಲಯ ಅದನ್ನು ಪರಿಗಣನೆ ಮಾಡದೆ 12-7-96ಕ್ಕೆ ಅಲ್ಲಿದ್ದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ಪ್ರತಿತಿಂಗಳು 1.5 ಕೋಟಿ ರೂಪಾಯಿ ವ್ಯಾಪಾರ ಆಗುತ್ತಿದ್ದ ಮಳಿಗೆಯನ್ನು ಅಧಿಕಾರಿಗಳ ಅಲಕ್ಷದಿಂದ ಜೊತೆಗೆ, ಅಲ್ಲಿದ್ದ ಪೀಠೋಪಕರಣಗಳನ್ನು ರಸ್ತೆಗೆ ಬಿಸಾಕಿ ಕರ್ನಾಟಕಕ್ಕೆ ಅದಂಥಹ ಅವಮಾನಕ್ಕೆ ಯಾರು ಜವಾಬ್ದಾರರು. ಜೊತೆಗೆ ಈ ಮಳಿಗೆಯನ್ನು ತೆರವು ಮಾಡುವ ಮಾಡುವ 3 ದಿವಸಗಳ ಮುಂಚೆ 8.5 ಕೋಟಿ ರೂಪಾಯಿಗಳಿಗೆ ಅದನ್ನು ವ್ಯಾಪಾರ ಮಾಡಿ, ಅದರಲ್ಲಿ 1 ಕೋಟಿ ರೂಪಾಯಿಗಳನ್ನು ಅಲ್ಲಿದ್ದ ಅಧಿಕಾರಿಗಳಿಗೆ ಕೊಟ್ಟಿದ್ದು ಈಗಾಗಲೇ ತಿಳಿದುಬಂದಿದೆ. ಶಾಮಿಲಾಗಿ ಇದ್ದಂಥ ಕಾಲವಧಿಯ ನಂತರ ಅಂದರೆ 2 ದಿವಸಗಳ ನಂತರದಲ್ಲಿ ನ್ಯಾಯಾಲಯಕ್ಕೆ ಅಪೀಲು ಹಾಕಿದಂತಹ ಪ್ರಮೇಯ ಏಕೆ ಬಂದಿತು? ಆ ಬಗ್ಗೆ ಅಲ್ಲಿದ್ದ ಅಧಿಕಾರಿಗಳ ವಿರುದ್ಧ ತಾವು ಯಾವ ಕ್ರಮ ತೆಗೆದುಕೊಂಡಿರಿ? ಜೊತೆಗೆ ಇನ್ನೊಂದು ವಿಸ್ಮಯ ಏನೆಂದರೆ, 3 ತಿಂಗಳಾದ ನಂತರದಲ್ಲಿ ಆ ಮಾಲೀಕರ ಜೊತೆ ಶಾಮಿಲಾಗಿದ್ದ ವ್ಯಕ್ತಿಗೆ ಆತನ ಹೆಸರು ಪ್ರಮೋಶನ್ ಲಿಸ್ಟ್‌ನಲ್ಲಿ 20ನೆಯದು ಆಗಿದ್ದರೂ ಎರಡೇ ದಿವಸದಲ್ಲಿ ಆತನಿಗೆ ಪ್ರಮೋಶನ್ ಕೊಟ್ಟಿರಿ. ಗುಪ್ತಾರವರನ್ನು ತೆಗೆದು ಮತ್ತು ಆತನಿಗೆ ಪ್ರಮೋಶನ್ ಕೊಟ್ಟಿರಿ. ಆ ಖಾಲಿ ಮೊದಲು ಮಾಲೀಕರ ಜೊತೆ ಶಾಮಿಲಾಗಿದ್ದರು ಎಂಬುದನ್ನು ನನ್ನ ನೇರ ಆಪಾದನೆ. ಎರಡನೆಯದು ನೇಕಾರರಿಗೆ ನೂಲು ಕೊಳ್ಳುವಂತಹ ವಿಚಾರದಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ತಮ್ಮ ಗಮನ ಸೆಳೆಯುತ್ತೇನೆ. 1995-1995ನೇ ಸಾಲಿನಲ್ಲಿ 18 ಕೋಟಿ ರೂಪಾಯಿಗಲ ನೂಲನ್ನು ತಾವು ಕೊಂಡು ನೇಕಾರರಿಗೆ ಕೊಟ್ಟಿದ್ದೀರಿ. ಆದರೆ 1995-96ನೇ ಸಾಲಿನಲ್ಲಿ ಕೇವಲ 3 ಕೋಟಿ ರೂಪಾಯಿಗಳ ನೂಲನ್ನು ತಾವು ಖರೀದಿ ಮಾಡಿಕೊಟ್ಟಿರಿ. 1994-95ನೇ ಸಾಲಿನಲ್ಲಿ 25ಸಾವಿರ ನೇಕಾರರ ಕುಟುಂಬಗಳಿಗೆ ನೂಲನ್ನು ಸರಬರಾಜು ಮಾಡಿ ತಾವು ಕೆಲಸವನ್ನು ಕೊಟ್ಟಿರಿ. ಆದರೆ 1995-96ನೇ ಸಾಲಿನಲ್ಲಿ 8 ಸಾವಿರ ಕಾರ್ಮಿಕರಿಗೆ ಮಾತ್ರ ಕೊಟ್ಟಿರಿ. ಅಂದರೆ 13 ಕೋಟಿ ರೂಪಾಯಿಗಳನ್ನು 1995-96ರಲ್ಲಿದ್ದ ನೇಕಾರರಿಗೆ ಖರ್ಚು ಮಾಡಬೇಕಾದ ಹಣವನ್ನು ಯಾವ ರೀತಿ ವಿನಿಯೋಗ ಮಾಡಿದಿರಿ ಎಂದು ನೋಡಿದರೆ ನಮಗೆ ನಿಮಗೆ ಎಲ್ಲರಿಗೂ ಇದು ನಾಚಿಕೆಯಾಗುವಂತಹ ವಿಚಾರವೆಂದು ಬಹಳ ನೋವಿನಿಂದ ಹೇಳಬೇಕಾಗಿದೆ. ತಾವು ಎಲ್ಲದಕ್ಕೂ ಆಡಳಿತಾತ್ಮಕ ಒಪ್ಪಿಗೆಯನ್ನು ಪಡೆಯಲಾಗಿದೆ ಎಂದು ಹೇಳಿದಿರಿ. ಆದರೆ ಪ್ರಿಯದರ್ಶಿನಿ, ಜಯನಗರದಲ್ಲಿ 4.83 ಲಕ್ಷ ರೂಪಾಯಿಗಳನ್ನು ರೆಸೋವೇಶನ್‌ಗಾಗಿ ಖರ್ಚು ಮಾಡಿದ್ದಕ್ಕೆ ಯಾವುದದೇ ಆಡಳಿತಾತ್ಮಕವಾದ ಒಪ್ಪಿಗೆ ಕೂಡ ಕೊಟ್ಟಿಲ್ಲ. ಇದಕ್ಕೆ ಯಾವುದೇ ದಾಖಲಾತಿಗಳನ್ನು ಇಲ್ಲಿ ಒದಗಿಸಬಲ್ಲೆ. ಅಲ್ಲಿ ಎಲ್ಲ ದಾಖಲಾತಿಗಳನ್ನು ತಿದ್ದಿ ಟ್ಯಾಂಪರ್ ಮಾಡಿ ಅಲ್ಲಿದ್ದುದನ್ನು ಹರಿದು ಬಿಸಾಕಿ ಈ ಕೆಲಸಗಳನ್ನೆಲ್ಲ ಕೊಟ್ಟಿರುವುದು ಅದಕ್ಕೆ ಸಂಬಂಧಿಸಿದ ದಾಖಲಾತಿಗಳು ಇಲ್ಲಿವೆ. ಇದು ಅಕ್ರಮಲ್ಲವೇ? ಪ್ರಿಯದರ್ಶಿನಿಯಲ್ಲಿ ಮಿಶನ್ ರಸ್ತೆಯಲ್ಲಿರುವ 14.50 ಲಕ್ಷ ರೂಪಾಯಿಗಳ ಅವ್ಯವಹಾರ ನಡೆದಿದೆ. ಅದು ಕೇವಲ

3 ದಿವಸಗಳೊಳಗಾಗಿ ವರ್ಕ್ ಆಗಿದೆ ಎಂದು ಬಿಲ್ ಪಾವತಿ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ನವದೆಹಲಿಯ ಶೋ ರೂಮ್‌ನಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗ ಯಾವ ಮಳಿಗೆಯನ್ನು ಬೇಡವೆಂದು ಬಿಟ್ಟಿದ್ದರೊ ಅದಕ್ಕೆ ತಾವು 14 ಲಕ್ಷ ರೂಪಾಯಿಗಳ ಕಮಿಶನ್ ಕೊಟ್ಟು, ಹಿಂದೆ ನಿರ್ಧಾರ ಮಾಡಿದ ದರಕ್ಕಿಂತ ಹೆಚ್ಚಿನ ದರವನ್ನು ಕೊಟ್ಟು, ಅಲ್ಲಿ ಹೆಚ್ಚು ವ್ಯಾಪಾರ ವಾಗದೆ ಕೇವಲ 60 ಲಕ್ಷ ರೂಪಾಯಿಗಳ ವ್ಯಾಪಾರ ಇವತ್ತಿನವರೆಗೆ ಆಗಿದೆ. ಆದರೆ 1.13 ಲಕ್ಷ ರೂಪಾಯಿಗಳ ಬಾಡಿಗೆಯನ್ನು ಕೊಟ್ಟಿದ್ದೀರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ? ಇನ್ನೊಂದು ಬಹಳ ನೋವಿನ ವಿಚಾರ.

ಅಧ್ಯಕ್ಷರು : ಇವತ್ತಂತೂ ಒಂದು ಶಪಥ ಮಾಡಿಕೊಂಡು ಬಂದೆ, ಬಾಯೀ ಬಿಚ್ಚಬಾರದು ಸುಮ್ಮನೆ ಕುಳಿತಿರಬೇಕು ನೀವೇ ನಡೆಸಿಕೊಂಡು ಹೋಗುವ ಹಾಗೆ ಮಾಡಬೇಕೆಂದು. ಗಮನಸೆಳೆಯುವ ಸೂಚನೆಯೆಂದರೆ ಸಂಕ್ಷಿಪ್ತವಾಗಿ, ನೀವು ಗಮನ ಸೆಳೆಯಬೇಕು. ಅದಕ್ಕೆ ಸಚಿವರು ಹೇಳಿಕೆ ಕೊಟ್ಟ ಮೇಲೆ ನೀವು ಅದನ್ನನುಸರಿಸಿ ನೀವು ಕ್ಲಾರಿಫಿಕೇಶನ್ ಕೇಳಬೇಕು. ಅದು ಬಿಟ್ಟು ಭಾಷಣ ಮಾಡುತ್ತಾ ಹೋದರೆ ಹೇಗೆ?

ಶ್ರೀ ಎ. ರಾಮದಾಸ್ : ಅವರು ಕೊಟ್ಟಿರುವ ಉತ್ತರದಲ್ಲಿ ಎಲ್ಲದಕ್ಕೂ ಆಡಳಿತಾತ್ಮಕ ಒಪ್ಪಿಗೆಯನ್ನು ಪಡೆದಿದೆ ನೇಕಾರರಿಗೆ ಯಾವುದೇ ಅನ್ಯಾಯವಾಗಿಲ್ಲವೆಂದು ಹೇಳಿದ್ದಾರೆ. ಅದಕ್ಕಾಗಿ ಅಂಕಿ ಅಂಶ ಕೊಟ್ಟೆ.

ಅಧ್ಯಕ್ಷರು : ಒಂದು ಗಮನ ಸೆಳೆಯುವ ಸೂಚನೆಗೆ 10 ನಿಮಿಷವಾದರೆ ಸದನ ಹೇಗೆ ನಡೆಸುವುದು

SRI Y. RAMAKRISHNA : The allegations are of serious nature and that is why the Hon'ble member is takingmore time.

MR. SPEAKER : I appreciate your sincerity in defending the Hon'ble member. We compliment you.

ಶ್ರೀ ವೈ. ರಾಮಕೃಷ್ಣ : 1994-95ರಲ್ಲಿ 18 ಕೋಟಿ ವ್ಯಾಪಾರ ಮಾಡಿ 1995-96ರಲ್ಲಿ 3 ಕೋಟಿಗೆ ಇಳಿಸಬೇಕಾದರೆ ಹೇಗೆ ಎಂದು ಯೋಚನೆ ಮಾಡಬೇಕು.

ಶ್ರೀ ಎ. ರಾಮದಾಸ್ : ದೆಹಲಿಯ ಖರೋಲ್ ಬಾಗ್‌ನಲ್ಲಿದ್ದ ಮಳಿಗೆಯನ್ನು ಖಾಲಿ ಮಾಡುವುದಕ್ಕಾಗಿ ಮತ್ತು ಅಪೀಲನ್ನು ಮಾಡುವುದಕ್ಕೋಸ್ಕರ ನ್ಯಾಯಾಲಯ ಕೊಟ್ಟಂತಹ 3 ತಿಂಗಳ ಅವಧಿಯ ನಂತರ 2 ದಿವಸ ತಡಮಾಡಿ ಏತಕ್ಕಾಗಿ ಅಪೀಲನ್ನು ಮಾಡಿದ್ದದೀರಿ.? ಈ ರೀತಿ ತಡಮಾಡಿದ್ದು ಯಾವ ಕಾರಣಕ್ಕಾಗಿ? ಅಪೀಲು ಮಾಡುವುದಕ್ಕೆ ಮುಂದೆ 8.5 ಕೋಟಿ ರೂಪಾಯಿಗಳ ವ್ಯಾಪಾರವಾಗಿದ್ದ ವಿಚಾರ ತಮ್ಮ ಗಮನಕ್ಕೆ ಬಂದಿದ್ದರೂ ನ್ಯಾಯಾಲಯಕ್ಕೆ ಏಕೆ ಈ ವಿಚಾರವನ್ನು ತಿಳಿಸಲಿಲ್ಲ. ಇದು ಪ್ರಮುಖವಾದ ವಿಚಾರ.

ಶ್ರೀ ಎಂ. ಎಸ್. ಪಾಟೀಲ್ : ನನ್ನ ಉತ್ತರವನ್ನು ಬಹುಶಃ ಅವರು ನೋಡಿಲ್ಲವೆಂದು ಕಾಣುತ್ತದೆ ಸಂಪೂರ್ಣವಾದ ವಿವರವನ್ನು ನಾನು ಒದಗಿಸಿದ್ದೇನೆ. 24-6-96ರಂದು ಹೈಕೋರ್ಟಿಗೆ

ನಾವು ಮನವಿಯನ್ನು ಸಲ್ಲಿಸಿದ್ದೆವು. 10-7-96ಕ್ಕೆ ಅವರು ಒಂದು ಆರ್ಡರನ್ನು ಕೊಟ್ಟು ನಮ್ಮ ಶೋ ರುಮ್ ಅನ್ನು ಖಾಲಿ ಮಾಡಬೇಕೆಂದು ತಿಳಿಸಿದರು. 12-2-93 ರಂದು ಎರಡನೇ ಶನಿವಾರ ಆಗಿದ್ದುದರಿಂದ ಕೋರ್ಟಿಗೆ ಹೋಗಲು ಅವಕಾಶ ಸಿಗಲಿಲ್ಲ. ಇದನ್ನು ಅರ್ಥ ಮಾಡಿಕೊಂಡೇ ಅವರು ಬಂದು ನಮ್ಮನ್ನು ಖಾಲಿ ಮಾಡಿಸುವ ವ್ಯವಸ್ಥೆ ಮಾಡಿಸಿದರು. ಅದರ ಮಗ್ಗುಲಲ್ಲಿ ಇದ್ದ ರಸ್ತೆಯಲ್ಲಿ ನಿಗಮದವರು ಒಂದು ಜಾಗವನ್ನು ಬಾಡಿಗೆಗೆ ಪಡೆದುಕೊಂಡಿದುದರಿಂದ ಸುರಕ್ಷಿತವಾಗಿ ಮಾಲನ್ನು ಸಾಗಿಸಲು ವ್ಯವಸ್ಥೆ ಮಾಡಿದ್ದರು. ಅವರು ಹೊರಕ್ಕೆ ಹಾಕುವಾಗ ಕೆಲವು ಫರ್ನಿಚರ್‌ಗಳು ಮುರಿದಿದ್ದು ನಿಜ, ಇದರಿಂದ ನಿಗಮಕ್ಕೆ ಯಾವ ತರಹದ ಲುಕ್ಸಾನ್ ಆಗಿಲ್ಲವೆಂದು ಹೇಳಲು ನಾನು ಇಷ್ಟ ಪಡುತ್ತೇನೆ. ಮತ್ತೇ ನೂಲು ಪರ್ಚೇಸ್ ಮಾಡುವ ಬಗ್ಗೆ ನಾನು ಡಿಟೈಲ್ ಆಗಿ ಹೇಳಿದ್ದೇನೆ. ಯಾವ್ಯಾವ ನೂಲನ್ನು ಎಲ್ಲೆಲ್ಲಿ ಪರ್ಚೇಸ್ ಮಾಡುತ್ತೇವೆಂದು. ಇನ್ನು ಕೋರಮಂಗಲ ಮತ್ತು ಮಿಶನ್ ರಸ್ತೆ, ಜಯನಗರ, ದಲ್ಲಿರುವ ಮಳಿಗೆಗಳು ಹತ್ತಾರು ವರ್ಷಗಳಿಂದ ನಮ್ಮ ನಿಗಮದವರು ನಡೆಸುತ್ತಿದ್ದು, ಅವನ್ನು ನವೀಕರಿಸಲು ಅವಶ್ಯಕತೆ ಇತ್ತು. ಅವಶ್ಯಕತೆಗೆ ಅನುಗುಣವಾಗಿ ಮಳಿಗೆಗಳನ್ನು ನವೀಕರಿಸಲು ಕಾರ್ಯಕ್ರಮವನ್ನು ಕೈಗೊಂಡೆವು. ಈ ಕಾರ್ಯದಲ್ಲಿ ಅವಶ್ಯಕತೆ ಇರುವಷ್ಟು ಮಾತ್ರ ಖರ್ಚು ಮಾಡಿದ್ದದೇವೆಯೇ ವಿನಃ ಇದರಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲವೆಂದು ಹೇಳುವುದಕ್ಕೆ ನಾನು ಇಚ್ಛೈಪಡುತ್ತೇನೆ.

11.30 ಎ. ಎಂ

ಅವರು ನಿರ್ದಿಷ್ಟವಾದ ಯಾವುದಾದರೊಂದು ಅಲಿಗೇಶನ್ ಅನ್ನು ನನ್ನ ಗಮನಕ್ಕೆ ತಂದಲ್ಲಿ ಅದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆಂಬ ಮಾತನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

ಶ್ರೀ ಎ. ರಾಮದಾಸ್ : ನಾನು ಸ್ಪಷ್ಟವಾಗಿ ಕೇಳಿದ್ದೆ: ದಿನಾಂಕ 22-6-96ಕ್ಕೆ ನ್ಯಾಯಾಲಯಕ್ಕೆ ಮತ್ತೆ ಮನವಿ ಸಲ್ಲಿಸಲು ಕೊನೇ ದಿನಾಂಕವಾಗಿತ್ತು. ಆದರೆ, ಸರ್ಕಾರ ದಿನಾಂಕ 24-6-96ರಂದು ಸಲ್ಲಿಸಿತು. ಮೂರು ತಿಂಗಳ ಕಾಲಾವಧಿಯ ನಂತರ ಸಲ್ಲಿಸಿರುವಂಥ ವಿಚಾರಕ್ಕೆ ಅಲ್ಲಿರುವ ಅಧಿಕಾರಿಗಳು ಶಾಮೀಲಾಗಿದ್ದಾರೆ. ಸುಮಾರು 8.5 ಕೋಟಿ ರೂಪಾಯಿಗಳಷ್ಟು ವ್ಯಾಪಾರವಾಗಿರುವುದರಲ್ಲಿ ಒಂದು ಕೋಟಿ ರೂಪಾಯಿಗಳನ್ನು ಬಳುವಳಿಯಾಗಿ ನೀಡಿರುವಂಥ ವಿಚಾರ ವರದಿಯಾಗಿದೆ. ಜೊತೆಗೆ ಈಗಾಗಲೇ ಹೇಳಿದ ರೀತಿಯಲ್ಲಿಯೇ ಅಲ್ಲಿದ್ದಂಥ ಸಾಮಾನುಗಳನ್ನು, ಬಟ್ಟೆಗಳನ್ನು ಪ್ರತಿಯೊಂದು ವಸ್ತುಗಳನ್ನೂ ಕೂಡ ಕರ್ನಾಟಕದ ಗೌರವ ಹಾಳಾಗುವ ರೀತಿ ಮಧ್ಯಾಹ್ನ 3 ಗಂಟೆಗೆ ರಸ್ತೆಗೆ ಬಿಸಾಕಿದ್ದನ್ನು ಸಾವಿರಾರು ಜನರು ನೋಡಿದ್ದಾರೆ. ಇದರ ಬಗ್ಗೆ ತಾವು ಯಾವ ಕ್ರಮ ಕೈಗೊಂಡಿದ್ದೀರಿ? ಇದಾದ ನಂತರ 19ನೇ ಸ್ಥಾನದಲ್ಲಿರುವ ಎ. ಕೆ. ಗುಪ್ತಾ ಎನ್ನುವ ಅಧಿಕಾರಿಗೆ ಹದಿನೆಂಟು ಜನರನ್ನು ಓವರ್-ಲುಕ್ ಮಾಡಿ ತಾವು ಪ್ರಮೋಶನ್ ಕೊಟ್ಟಿದ್ದೀರಿ. ಅಂದರೆ, ಈ ಕೆಲಸವನ್ನು ಮಾಡಿದ್ದಕ್ಕೋಸ್ಕರ ಅವರಿಗೆ ಪ್ರಮೋಶನ್ ಕೊಟ್ಟಿದ್ದೀರಾ ಎಂಬ ಪ್ರಶ್ನೆಯನ್ನು ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್ : ಕೋರ್ಟಿನ ಆದೇಶದಂತೆ ವೆಕೇಟ್ ಮಾಡುವಾಗ ಬೀಲೀಫ್ ಬಂದು ಎಕ್ಸಿಕ್ಯೂಟ್ ಮಾಡುವ ಸಂದರ್ಭದಲ್ಲಿ ಕೆಲವು ವಸ್ತುಗಳನ್ನು ಹೊರಗಡೆ

ಹಾಕತಕ್ಕಂಥಾದ್ದು ಸ್ವಾಭಾವಿಕ. ನಾನು ಈಗಾಗಲೇ ತಿಳಿಸಿದ್ದೆ, ಇದನ್ನು ಮನಗಂಡೇ ಪಕ್ಕದಲ್ಲಿದ್ದ ಒಂದು ಶಾಪನ್ನು ಬಾಡಿಗೆ ಆಧಾರದ ಮೇಲೆ ತೆಗೆದುಕೊಂಡಿದ್ದ ಕಾರಣ ಲುಕ್ಸಾನಾಗುವ ಹಂತಕ್ಕೆ ಏನೂ ಹೊಗಿಲ್ಲ. ಆದರೆ, ಕೆಲವು ಪೀಠೋಪಕರಣಗಳು ಮಾತ್ರ ಲುಕ್ಸಾನಾಗಿದ್ದು ನಿಜ. ಇನ್ನು ಅಲ್ಲಿದ್ದಂಥ ಆ ಅಧಿಕಾರಿಗೆ ಪ್ರಮೋಶನ್ ಕೊಡಲಾಗಿದೆಯೆಂದು ಹೇಳುತ್ತಿರುವುದರಿಂದ, ನನಗೆ ಆ ಮಾಹಿತಿ ತಿಳಿದಿಲ್ಲವಾದ್ದರಿಂದ ಆ ಕುರಿತು ವಿಚಾರ ಮಾಡಿ ತಮಗೆ ತಿಳಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಹೇಳುವುದೇನೆಂದರೆ, ಕೋರ್ಟಿನಲ್ಲಿ ಆ ಹಂತಕ್ಕೆ ಹೋಗುವವರೆಗೂ ನಿಮ್ಮವರು ಏಕೆ ಮುನ್ನೆಚರಿಕೆ ವಹಿಸಲಿಲ್ಲವೆಂಬುದು ಅವರ ತಕರಾರು.

ಶ್ರೀ ಕೆ. ಎಸ್. ಈಶ್ವರಪ್ಪ : ಕೋರ್ಟಿನಿಂದ ಇಂತಹ ದಿನಾಂಕದೊಳಗೆ ಅಪೀಲ್ ಹಾಕಬೇಕೆಂದು ಹೇಳಿದ್ದರೂ ಸಹ ಆ ದಿನಾಂಕದೊಳಗೆ ಏಕೆ ಹಾಕಿಲ್ಲ? ಅಪೀಲ್ ಹೋಗದಿದ್ದವರ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ? ಪ್ರಮೋಶನ್ ಬೇರೆ ಕೊಡುತ್ತಿದ್ದೀರಿ. ಯಾರಾದರೂ ಕೋರ್ಟಿಗೆ ಹೋಗಿ ರಾಜ್ಯ ಸರ್ಕಾರದ ಮರ್ಯಾದೆ ಹಾಗೂ ಆಸ್ತಿ ಉಳಿಸಬೇಕಾಗಿತ್ತು, ಕೋರ್ಟಿಗೆ ಹೋಗಲು ಸರ್ಕಾರಕ್ಕೆ ಏನು ತೊಂದರೆಯಾಗುತ್ತಿತ್ತು?

ಅಧ್ಯಕ್ಷರು : ಆ ಅಧಿಕಾರಿಗಳು ನಿರ್ಲಕ್ಷ್ಯ ಮಾಡಿದ್ದಾರೆ.

ಶ್ರೀ ಎಂ. ಎಸ್. ಪಾಟೀಲ್ : ದಿನಾಂಕ 24-6-96ರಂದೇ ನಾವು ಅಪೀಲ್ ಫೈಲ್ ಮಾಡಿದ್ದೇವೆ. ಮೊದಲ ಅಪೀಲ್ ಫೈಲ್ ಮಾಡಿದ್ದು ದಿನಾಂಕ 12-6-96ರಂದು.

ಶ್ರೀ ಎ. ರಾಮದಾಸ್ : ಸುಮಾರು 8.5 ಕೋಟಿ ರೂಪಾಯಿಗಳಿಗೆ ವ್ಯಾಪಾರವಾಗಿರುವುದನ್ನು ಅಲ್ಲಿದ್ದಂಥ ಅಧಿಕಾರಿಗಳು ಇದರಲ್ಲಿ ಅವರಿಗೆ ಶಾಮೀಲಾಗಿ ಒಂದು ಕೋಟಿ ರೂಪಾಯಿಗಳನ್ನು ಬಿಟ್ಟು ಕೊಡುವುದಾದರೆ ಮಾತ್ರ ಕೊಡುತ್ತೇವೆನ್ನುವ ವ್ಯವಹಾರ ನಡೆದಿತ್ತು. ಅಲ್ಲಿದ್ದಂಥ ಎ. ಕೆ. ಗುಪ್ತಾ ಎನ್ನುವ ಅಧಿಕಾರಿ ಶಾಮೀಲಾಗಿದ್ದಾರೆಂಬ ವಿಚಾರವನ್ನು ನಾನು ನೇರವಾಗಿ ಹೇಳುತ್ತಿದ್ದೇನೆ.

ಶ್ರೀ ಎಂ. ಎಸ್. ಪಾಟೀಲ್ : ಸದಸ್ಯರು ಹೇಳುತ್ತಿರುವ ವಿಷಯದಲ್ಲೇನಾದರೂ ತಾರತಮ್ಯವಾಗಿತ್ತೆಂದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂಬ ವಿಚಾರವನ್ನು ತಮ್ಮ ಮೂಲಕ ತಿಳಿಸಲು ಇಚ್ಛಿಸುತ್ತೇನೆ.

ಶ್ರೀ ಎ. ರಾಮದಾಸ್ : ಇದು ನನಗರ್ಥವಾಗುತ್ತಿಲ್ಲ, ಬಹಳ ನೋವಿನಿಂದ ಇದನ್ನು ಹೇಳುತ್ತಿದ್ದೇನೆ.

ಶ್ರೀ ಕೆ. ಎಸ್. ಈಶ್ವರಪ್ಪ : ಇದು ಬಹಳ ಸ್ಪಷ್ಟವಾಗಿದೆ.

ಶ್ರೀ ಭೈರೇಗೌಡ : ಮಾನ್ಯ ಸದಸ್ಯರು ಹೇಳಿರುವಂಥಾದ್ದು ನಿಜವಾಗಿದ್ದರೆ ತಾವು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತೀವ್ರ ಕ್ರಮ ಕೈಗೊಳ್ಳುವುದಾಗಿ ಮಾನ್ಯ ಮಂತ್ರಿಗಳು ತಿಳಿಸಿದ್ದರೂ ಅದಕ್ಕಿಂತಲೂ ಇನ್ನೇನು ಮಾಡಬೇಕು? ನಮ್ಮ ವ್ಯವಸ್ಥೆಯಲ್ಲಿ ಒಂದೇ ಸಾರಿ ಯಾರಿಗೂ ನೇಣು ಹಾಕುವುದಕ್ಕಾಗುವುದಿಲ್ಲ. ಪ್ರಕರಣದ ಬಗ್ಗೆ ವಿಚಾರಣೆಯಾಗಬೇಕಾಗುತ್ತದೆ, ವಿಚಾರಣೆಯಲ್ಲಿ

ಸಾಬೀತಾಗಬೇಕಾಗುತ್ತದೆ, ನಂತರ ಕಾನೂನು ರೀತ್ಯ ಕ್ರಮ ಕೈಗೊಳ್ಳಬೇಕಾಗುತ್ತದೆ.. ಇದನ್ನು ತಾವೆಲ್ಲರೂ ಒಪ್ಪುತ್ತೀರೆಂದು ನಾನು ಭಾವಿಸುತ್ತೇನೆ.

ಶ್ರೀ ಎ. ರಾಮದಾಸ್ : ವಿಚಾರಣೆಗೆ ತಾವು ಆಜ್ಞೆ ಮಾಡಿದ್ದೇ ಆದರೆ ಆ ಕುರಿತು ಸಂಬಂಧಪಟ್ಟ ಪೂರ್ತಿ ದಾಖಲೆಗಳನ್ನು ಕೊಡಲು ನಾನು ಸಿದ್ಧನಿದ್ದೇನೆ. ಕಾರಣ, ಇದು ಒಬ್ಬರ ಪ್ರಶ್ನೆಯಲ್ಲ. ಸುಮಾರು 13 ಕೋಟಿ ರೂಪಾಯಿಗಳ ನೂಲಿನ ವ್ಯವಹಾರದಲ್ಲಾಗಿರುವ ಸಮಸ್ಯೆಗಳ ಬಗ್ಗೆ ಈಗಾಗಲೇ ಅವರು ಒಪ್ಪಿಕೊಂಡಿರುವ ರೀತಿಯಲ್ಲಿ ತಮ್ಮ ಆದೇಶದ ಪ್ರಕಾರ ನಾನು ದಾಖಲೆಗಳನ್ನು ಕೊಡಲು ಸಿದ್ಧನಿದ್ದೇನೆ.

ಅಧ್ಯಕ್ಷರು : ತಾವು ದಾಖಲೆಗಳನ್ನು ಕಳುಹಿಸಿಕೊಡಿ, ಆ ಕುರಿತು ಡಿಪಾರ್ಟ್‌ಮೆಂಟಲ್ ಎನ್‌ಕ್ವೇರಿ ಮಾಡುತ್ತಾರೆ.

ಶ್ರೀ ಎ. ರಾಮದಾಸ್ : ಅಲ್ಲಿರುವಂಥ ವ್ಯವಸ್ಥಾಪಕ ನಿರ್ದೇಶಕರೇ ಈ ವ್ಯವಹಾರದಲ್ಲಿ ಭಾಗಿಯಾಗಿರುವುದರಿಂದ ತಾವು ಡಿಪಾರ್ಟ್‌ಮೆಂಟಲ್ ಎನ್‌ಕ್ವೇರಿ ಮಾಡಿದರೆ ಏನು ನ್ಯಾಯ ಸಿಗುತ್ತದೆ ಎಂಬುದನ್ನು ಸ್ವಲ್ಪ ಯೋಚಿಸಬೇಕು.

ಶ್ರೀ ಎಂ. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇದು ಈಗಿನದಲ್ಲ, ಹಿಂದೆಯೇ ಆಗಿತ್ತು. ಮಾನ್ಯ ಸದಸ್ಯರು ಹೇಳುತ್ತಿರುವಂತೆ ಅವರು ಯಾರೇ ಆಗಿರಲಿ, ಎಂತಹ ಹುದ್ದೆಯಲ್ಲಿಯೇ ಇರಲಿ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು : ನಮ್ಮಲ್ಲಿ ಏನೇನು ಎನ್‌ಕ್ವೇರಿಗಳಿವೆ? ಡಿಪಾರ್ಟ್‌ಮೆಂಟಲ್ ಎನ್‌ಕ್ವೇರಿ, ಸಿಬಿಐ ಎನ್‌ಕ್ವೇರಿ, ಸಿ. ಓ. ಡಿ. ಎನ್‌ಕ್ವೇರಿ, ಲೋಕಾಯುಕ್ತ ಎನ್‌ಕ್ವೇರಿ, ಹೌಸ್ ಕಮಿಟಿ ಎನ್‌ಕ್ವೇರಿ - ಇದೆ. ಈ ಎಲ್ಲಾ ಎನ್‌ಕ್ವೇರಿಗಳಲ್ಲೂ ಏನೇನು ಆಗುತ್ತದೆಂದು ನಮಗೆ ಸ್ವಲ್ಪ ಹೆಚ್ಚು - ಕಡಿಮೆ ಐಡಿಯಾ ಇದೆ. ಈ ಕುರಿತು ಏನಾದರೊಂದು ಎನ್‌ಕ್ವೇರಿ ಮಾಡಿಸೋಣ. ತಾವು ಮಾನ್ಯ ಮಂತ್ರಿಗಳಲ್ಲಿ ವಿಶ್ವಾಸವಿಡಬೇಕು.

ಶ್ರೀ ಎಂ. ಎಸ್. ಪಾಟೀಲ್ : ಈ ವಿಚಾರವನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಯಾರಾದರೂ ತೆಗೆದುಕೊಳ್ಳಬಹುದು.

ಅಧ್ಯಕ್ಷರು : ಪಬ್ಲಿಕ್ ಅಕೌಂಟ್ಸ್ ಕಮಿಟಿಯೇ ಇದನ್ನು ವೆರಿಫೈ ಮಾಡಲಿ.

SRI C. BYRE GOWDA : It is always open for P. A. C to look into these things.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದರು ಎಂದರೆ, ನಮ್ಮಲ್ಲಿರುವಂಥ ಕಾನೂನು ವ್ಯವಸ್ಥೆಯಿಂದ ಯಾರಿಗೂ ಒಂದೇ ಸಾರಿ ನೇಣು ಹಾಕುವುದಕ್ಕಾಗುವುದಿಲ್ಲವೆಂದು ಈಗಾಗಲೇ ತಾವು ವ್ಯಾಖ್ಯಾನ ಮಾಡಿದಿರಲ್ಲ, ಆದುದರಿಂದ, ನೇಣನ್ನು ಕಂಪ್ಲೆನೆಂಟೇ ಹಾಕಿಕೊಳ್ಳಬೇಕೆಂದು ಅವರು ಹೇಳಿದರು.